# ದೈವತ್ವದಿಂದ ಕುಲಗುರು ತತ್ವಕ್ಕೇರಿದ ಕಾಯಕ ಶರಣರು

**ಅಕ್ಷತ ಎಂ.ಜಿ.**

ಸಂಶೋಧನಾರ್ಥಿ, ಡಾ. ಹಾ.ಮಾ.ನ ಸಂಶೋಧನಾ ಕೇಂದ್ರ, ಉಜಿರೆ.

DOI: https://doi.org/10.5281/zenodo.15791082

## ABSTRACT:

ಸುಮಾರು ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದಲ್ಲಿ ಉದಯಿಸಿದ ವೀರಶೈವ ಧರ್ಮದಲ್ಲಿದ್ದ ಭಕ್ತ-ಭಗವಂತ ಮೊದಲಾದ ಸಂಸ್ಕಾರಗಳು ಜನರನ್ನಾಕರ್ಷಿಸಿತು. ಜನರ ಬುದ್ಧಿ ಮತ್ತು ದೇಹವನ್ನು ಚುರುಕುಗೊಳಿಸಿತು. ಸಾಮಾಜಿಕ ಅಸಮಾನತೆಯಲ್ಲಿ ಹಿಂದುಳಿದವರು ಜಾತಿ, ಕಸುಬು, ಇತ್ಯಾದಿಗಳ ಹಂಗಿಲ್ಲದೆ ಮುಕ್ತವಾಗಿ ಸೇರಬಹುದಾದ ವೀರಶೈವ ಧರ್ಮಕ್ಕೆ ಆಕರ್ಷಿತರಾದರು. ಜನರಿಗೆ ಸಂಸ್ಕಾರದೊಂದಿಗೆ ಅರ್ಥಪೂರ್ಣ, ಸಾರ್ಥಕ್ಯದ ಬದುಕನ್ನು ಗಳಿಸಲು ಸಾಧ್ಯವಾಯಿತು. ಜೀವನ ಸಾರ್ಥಕ್ಯಕ್ಕಾಗಿ ಶಿವಭಕ್ತಿ ಮತ್ತು ಕಾಯಕ ನಿಷ್ಠೆಯಲ್ಲಿ ತೊಡಗಿದವರಲ್ಲಿ ಮಾದಾರ ಚೆನ್ನಯ್ಯ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಮೊದಲಾದವರು ಪ್ರಮುಖರು. ಕಾಯಕ ಶರಣರಿಂದು ತಮ್ಮ ಸಮುದಾಯದವರ ಕುಲಗುರುಗಳಾಗಿ ಆರಾಧನೆಗೆ ಒಳಪಟ್ಟದ್ದಲ್ಲದೆ ಸರಕಾರದ ವಲಯದಲ್ಲೂ ಗೌರವಿಸಲ್ಪಟ್ಟಿರುವುದು ಗಮನಾರ್ಹ.

ಒಟ್ಟಿನಲ್ಲಿ ಅವರು ಸಮಾಜಕ್ಕೆ ಕೊಟ್ಟ ಕೊಡುಗೆಯ ನೆನಪಿನಾರ್ಥವಾಗಿ ಅವರ ಜಯಂತ್ಯುತ್ಸವವನ್ನು ಖಾಸಗಿ ಹಾಗೂ ಸರಕಾರದ ಮಟ್ಟಿನಲ್ಲಿ ಆಚರಿಸುವ ಮೂಲಕ ಶರಣರನ್ನು ಅವರ ಮೌಲ್ಯಗಳನ್ನು ಉಳಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ.

## KEYWORDS:

ಕಾಯಕ, ಶರಣ, ಶಿವಶರಣ, ಶತಮಾನ, ವಚನ, ಅಂಕಿತ ನಾಮ.

**ಪೀಠಿಕೆ:**

ಹನ್ನೊಂದು ಹನ್ನೆರಡನೇ ಶತಮಾನ ಕರ್ನಾಟಕದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಸ್ಥಿತಿ – ಪರಕೀಯರ ದಾಳಿ, ರಾಜ್ಯಕ್ಕಾಗಿ ರಾಜರುಗಳ ಪರಸ್ಪರ ಕಿತ್ತಾಟ, ಜೈನ ಬೌದ್ಧ ವೈಷ್ಣವ ಧರ್ಮಗಳ ನಡುವಿನ ಕಿತ್ತಾಟ ಇವೆಲ್ಲದರಿಂದ ಕುಸಿದು ಹೋದ ಆರ್ಥಿಕ ಪರಿಸ್ಥಿತಿ. ಇವುಗಳಿಂದ ಹದಗೆಟ್ಟ ಸಮಾಜಕ್ಕೆ, ಅಭದ್ರತೆ ಮತ್ತು ಕಷ್ಟಕರ ಜೀವನದಿಂದ ಬೇಸತ್ತ ಜನತೆಗೆ ನೆರಳಿನ ರೂಪದಲ್ಲಿ ನೆರವು ನೀಡಿದ್ದು ಶಿವಶರಣರು. ಶಿವಶರಣರು ಮೇಲ್ವರ್ಗದವರ ಕಾಲ್ತುಳಿತಕ್ಕೆ ಸಿಲುಕಿ ಸಮಾಜದ ನೇಪಥ್ಯಕ್ಕೆ ಸರಿದ ಬಡ, ಸಾಮಾನ್ಯ, ಜನರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ

ಯಶಸ್ವಿಯಾದರು. ಹಿಂದಿನಿಂದಲೂ ಇದ್ದ ಶೈವ ಧರ್ಮವನ್ನು ಹೊಸ ತತ್ವ ಮತ್ತು ವಿಚಾರಗಳಿಗೆ ಬಳಸಿಕೊಳ್ಳುವ ನಿಟ್ಟಿನಲ್ಲಿ ಶೈವ ಧರ್ಮವನ್ನು ವೀರಶೈವ ಧರ್ಮವೆಂದು ಕರೆದರು. ಅವರ ತತ್ವ, ಆಚಾರ, ವಿಚಾರಗಳು, ಭಕ್ತ–ಭಗವಂತನೆಂಬ ಪರಿಕಲ್ಪನೆ, ಮುಕ್ತಿ ಮತ್ತದರ ಪ್ರಾಮುಖ್ಯತೆ, ಅದನ್ನು ಹೊಂದುವ ಪರಿ, ಗುರುವಿನ ಮಹತ್ವ, ಲಿಂಗ ಪೂಜೆ, ದಾಸೋಹ ಈ ಎಲ್ಲಾ ಸಂಸ್ಕಾರಗಳು ಜನ ಸಾಮಾನ್ಯರನ್ನು ಆಕರ್ಷಿಸಿತು. ಶತಮಾನಗಳಿಂದ ಜಡವಾಗಿದ್ದ ಅವರ ಬುದ್ಧಿ ಮತ್ತು ದೇಹ ಎರಡನ್ನೂ ಚುರುಕುಗೊಳಿಸಿತು. ಮುಖ್ಯವಾಗಿ ಜಾತಿಯ ಕಾರಣಕ್ಕಾಗಿ ಧಾರ್ಮಿಕವಾಗಿ ಹಿಂದುಳಿದ ಜನರು, ಇಲ್ಲಿನ ಎಲ್ಲಾ ಜಾತಿ, ಧರ್ಮ, ಕಸುಬು, ಲಿಂಗ ಇವುಗಳ ಹಂಗಿಲ್ಲದೆ ಎಲ್ಲರೂ ಸೇರಬಹುದಾದ ವೀರಶೈವ ಧರ್ಮದ ತತ್ವಗಳಿಗೆ ಆಕರ್ಷಿತರಾದರು. ಹೀಗೆ ವೀರಶೈವ ಧರ್ಮಕ್ಕೆ ಸೇರಿದ ಜನರು ಅಲ್ಲಿಂದ ಉತ್ತಮ ಸಂಸ್ಕಾರ, ಜೀವನೋಪಾಯಕ್ಕಾಗಿ ಒಂದು ನಿಶ್ಚಿತ ವೃತ್ತಿ, ಗುರು, ಲಿಂಗ, ಜಂಗಮ ದಾಸೋಹ, ಬಲ್ಲವರು ಅನುಭಾವಗಳ ಅನುಸಂಧಾನ ಹೀಗೆ ಹಲವಾರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ತೊಡಗಿ ಒಂದು ಅರ್ಥಪೂರ್ಣ ಹಾಗೂ ಸಾರ್ಥಕ್ಯದ ಬದುಕನ್ನು ಗಳಿಸಲು ಸಾಧ್ಯವಾಯಿತು. ಒಟ್ಟಿನಲ್ಲಿ ಈ ಮೂಲಕ ಬಸವಾದಿ ಶಿವಶರಣರು ಅಂದಿನ ಸಾಮಾಜಿಕ, ಧಾರ್ಮಿಕ, ಮಾತ್ರವಲ್ಲದೆ ಸಾಹಿತ್ಯಿಕವಾಗಿಯೂ ಒಂದು ಕ್ರಾಂತಿಗೆ ಮುನ್ನುಡಿಯನ್ನು ಹಾಡಿದರು. ಅದಮ್ಯವಾದ ಪ್ರಾಮಾಣಿಕ ಶಿವ ಭಕ್ತಿಯ ಜೊತೆಗೆ ಬಸವಣ್ಣನ ಕಾಯಕವೇ ಕೈಲಾಸ ಎಂಬ ತತ್ವಕ್ಕೆ ಬದ್ಧರಾದವರು. ಕಾಯಕ ನಿಷ್ಠೆಯ ಜೊತೆಗೆ ಭಕ್ತಿ ಇವೆರಡರಿಂದ ನಿಜವಾಗಿಯೂ ಕೈಲಾಸವನ್ನೇ ಸೇರಿಕೊಂಡವರು.

ನಡುಗನ್ನಡ ಸಾಹಿತ್ಯದ ಪ್ರಕಾರಗಳಲ್ಲಿ ಒಂದಾದ ವಚನ ಸಾಹಿತ್ಯವು ಶಿವಶರಣರಿಂದ ರಚಿತವಾದ ಮೌಖಿಕ ಸಾಹಿತ್ಯ. ಸಾಮಾಜಿಕ ಚಿಂತಕರ ಜೀವನಾನುಭವದ ಹಿನ್ನಲೆಯಲ್ಲಿ ಸೃಷ್ಟಿಯಾದ ಇವುಗಳು ಹಾಡಿದರೆ ಪದ್ಯವಾಗಿಯೂ, ಓದಿದರೆ ಗದ್ಯವಾಗಿಯೂ ಇರುವ ಒಂದು ವಿಶಿಷ್ಟ ಪ್ರಕಾರ. ವಚನ ಎಂದರೆ ಮಾತು ಅಥವಾ ಪ್ರಮಾಣ ಎಂದರ್ಥವಿದೆ. ಸರಳವಾದ ಆಡುಭಾಷೆಯ ಮಾತಿನಲ್ಲಿ ಹುದುಗಿದ್ದ ಬದುಕಿನ ಸತ್ಯದ ಸಾಕ್ಷಾತ್ಕಾರಕ್ಕಾಗಿ ಇದು ಕರ್ನಾಟಕದಾದ್ಯಂತ ಕನ್ನಡಿಗರ ಮನೆ ಮನಸ್ಸನ್ನು ಆವರಿಸಿತ್ತು ಎಂದರೂ ತಪ್ಪಾಗಲಾರದು. ಹನ್ನೊಂದನೇ ಶತಮಾನದಲ್ಲಿ ಹುಟ್ಟಿದ ವಚನ ಸಾಹಿತ್ಯವು ಬಸವಣ್ಣನವರ ಸಾಮಾಜಿಕ ಚಿಂತನೆಗಳ ರೂಪುರೇಶೆಯೊಂದಿಗೆ ಹನ್ನೆರಡನೇ ಶತಮಾನದ ಕಡೆಯವರೆಗೂ ಮುಂದುವರೆಯಿತು ಎನ್ನಬಹುದು. ಮೇಲ್ಜಾತಿಯವರ ತುಳಿತಕ್ಕೆ ಒಳಗಾಗಿದ್ದವರೆಲ್ಲರೂ ಬಸವಣ್ಣನವರ ಸರ್ವಧರ್ಮ ಸಮನ್ವಯ ನಿಲುವಿಗೆ ಮಾರುಹೋಗಿ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು, ಬದುಕಿಗೊಂದು ಸಾರ್ಥಕ್ಯ ದೊರಕಿಸಲು ಶಿವಶರಣರ ತತ್ವಕ್ಕೆ ಶರಣರಾದರು. ಹೀಗೆ ಜೀವನ ಸಾರ್ಥಕ್ಯ ಬೇಕೆನಿಸಿ ತಮ್ಮ ಜಾತಿ ಕುಲ ವೃತ್ತಿಯನ್ನೂ

ಮೀರಿ ಇಂತಹ ಶಿವಶರಣರಾದವರಲ್ಲಿ ಮಾದಾರ ಚೆನ್ನಯ್ಯ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಸೂಳೆ ಸಂಕಯ್ಯ, ಒಕ್ಕಲು ಮಾದಯ್ಯ, ಆಯ್ದಕ್ಕಿ ಲಕ್ಕಮ್ಮ, ಪ್ರಮುಖರು. ಶರಣರ ಸಂಘದಿಂದ ತಮ್ಮ ಜೀವನಾನುಭವದಿಂದ ಹೊರಟ ಸರಳ ಮಾತುಗಳೇ ವಚನವಾದವು. ಭಕ್ತಿ, ನಿಷ್ಠೆ, ಉತ್ತಮ ಸಂಸ್ಕಾರಗಳಿಂದ ಶಿವಶರಣರಾದರು. ಇಲ್ಲಿ ಇವರ ಭಕ್ತಿಗೆ ಮಹತ್ವವಿತ್ತೇ ಹೊರತು ಅವರ ಜಾತಿ ಅಥವಾ ಕಸುಬಿಗಲ್ಲ.

**ಸೆಟ್ಟಿಯೆಂಬೆನೆ ಸಿರಿಯಾಳನ**
**ಮಡಿವಾಳನೆಂಬೆನೆ ಮಾಚಯ್ಯನ**
**ಡೋಹರನೆಂಬೆನೆ ಕಕ್ಕಯ್ಯನ**
**ಮಾದಾರನೆಂಬೆನೆ ಚೆನ್ನಯ್ಯನ**
**ಆನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯಾ**

ಈ ಹಿನ್ನೆಲೆಯಲ್ಲಿ ಬಸವಣ್ಣನ ಈ ವಚನಗಳು ಅವರ ಕುಲ ಕಸುಬನ್ನು ಸಾರುವ ವಚನಗಳು. ಬಸವಣ್ಣ ತನಗೆ ರಕ್ತಗತವಾಗಿ ಬಂದ ಆಚಾರ ವಿಚಾರಗಳನ್ನು ಬದುಕಿನಲ್ಲಿ ಮತ್ತಷ್ಟು ಕರಗತಗೊಳಿಸಿಕೊಂಡು ದೈವತ್ವಕ್ಕೇರಿದರೆ, ಬಸವಣ್ಣನ ತತ್ವಗಳಿಗೆ ಮಾರುಹೋದ ಇತರ ಸಾಮಾನ್ಯ ವರ್ಗದ ಶರಣರು ತಮಗೆ ರಕ್ತಗತವಲ್ಲದ ಆಚಾರ ವಿಚಾರ ಹಾಗೂ ಆಚರಣೆಗಳನ್ನು ಕಲಿತು, ತಮ್ಮ ಬಾಳಿನಲ್ಲಿ ಕರಗತಗೊಳಿಸಿ ಸ್ವ ಪ್ರಯತ್ನ ಹಾಗೂ ಪರಿಶ್ರಮದಿಂದ ದೈವತ್ವಕ್ಕೇರಿದರು. ಬಸವಣ್ಣನ ಕಾಯಕವೇ ಕೈಲಾಸ ಎಂಬ ತತ್ವಕ್ಕೆ ಬದ್ಧರಾಗಿ ಭಕ್ತಿಯೊಂದಿಗೆ ತಾವು ಮಾಡುವ ವೃತ್ತಿಯ ಶ್ರೇಷ್ಠತೆಯ ಜೊತೆಗೆ ಕಾಯಕ ಮಹತ್ವವನ್ನು ಜನತೆಗೆ ಸಾರಿದವರು. ಮತ್ತು ಆ ಮೂಲಕ ಕಾಯಕ ಶರಣರೆನಿಸಿ, ದೈವತ್ವಕ್ಕೇರಿದವರು. ಇಂದು ಆ ಕಾಯಕ ಶರಣರು ಅವರ ಸಮುದಾಯದವರ ಕುಲ ಗುರುಗಳಾಗಿ ಆರಾಧನೆಗೆ ಒಳಪಟ್ಟಿದ್ದಾರೆ ಮತ್ತು ಸರಕಾರದ ವಲಯದಲ್ಲೂ ಅವರ ಹೆಸರಿನ ಜಯಂತ್ಯುತ್ಸವಗಳು ನೆರವೇರುತ್ತಿರುವುದು ಗಮನಾರ್ಹ. ಹೀಗೆ ದೈವತ್ವದಿಂದ ಕುಲಗುರು ತತ್ವಕ್ಕೇರಿದ ಕಾಯಕ ಶರಣರನ್ನು ಕುರಿತು ಅಧ್ಯಯನ ಮಾಡುವ ನಿಟ್ಟಿನಲ್ಲಿ ಈ ಲೇಖನವನ್ನು ರಚಿಸಲಾಗಿದೆ.

ಬಸವಣ್ಣ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ಮಾದರಸ ಮತ್ತು ಮಾದಲಾಂಬಿಕೆಗೆ ಜನಿಸಿದ ಬಸವಣ್ಣ, ಕಲಚೂರಿ ಅರಸ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದರು. ತನ್ನ ಶಿವತತ್ವ ಪ್ರತಿಪಾದನೆ ವಚನಗಳ ಮೂಲಕ ವಿಶ್ವಗುರು ಎನಿಸಿಕೊಂಡ. ಈ ಕಾರಣದಿಂದ ಬಸವಣ್ಣ ಹಾಗೂ ಆತನ ತತ್ವಗಳು ಸಾರ್ವಕಾಲಿಕ. ಆದ್ದರಿಂದ 1913 ರಲ್ಲಿ ಕರ್ನಾಟಕದ ಗಾಂಧಿಯೆಂದು ಪ್ರಸಿದ್ಧರಾದ ಹಡೇಕರ್ ಮಂಜಪ್ಪ ಅವರ ನೇತೃತ್ವದಲ್ಲಿ ದಾವಣಗೆರೆಯಲ್ಲಿ ಬಸವ ಜಯಂತಿಯನ್ನು ಮೊದಲ ಬಾರಿಗೆ ಆಚರಿಸಲಾಯಿತು. ಮತ್ತು ಪ್ರತಿ ವರ್ಷವೂ ಎಪ್ರಿಲ್ 30 ರಂದು ಬಸವ

ಜಯಂತಿಯನ್ನು ಕರ್ನಾಟಕದಾದ್ಯಂತ ಬಹಳ ಅದ್ದೂರಿಯಾಗಿ ಆಚರಿಸಲಾಗುತ್ತದೆ.

ಮಡಿವಾಳ ಮಾಚೀದೇವ ಹನ್ನೆರಡನೇ ಶತಮಾನದ ವಚನಕಾರರಲ್ಲಿ ಮಡಿವಾಳ ಮಾಚೀದೇವನೂ ಒಬ್ಬ ಶಿವಶರಣ. ಈತನ ಜನ್ಮಸ್ಥಳ ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ದೇವರ ಹಿಪ್ಪರಗಿ ಗ್ರಾಮ. ಈತ ಮಡಿವಾಳ ಮಲ್ಲಯ್ಯ ದಂಪತಿಗಳ ಪುತ್ರ. ವೃತ್ತಿಯಲ್ಲಿ ಅಗಸ ಅಥವಾ ಬಟ್ಟೆ ಮಡಿ ಮಾಡುವುದು. ಕಲ್ಲಿನಾಥ ಅಥವಾ ಕಲಿದೇವನ ವರ ಪ್ರಸಾದದಿಂದ ಹುಟ್ಟಿದ್ದರಿಂದ ಈತ ತನ್ನ ವಚನಗಳಲ್ಲಿ ಕಲಿದೇವರ ದೇವ ಎಂಬ ಅಂಕಿತ ನಾಮದೊಂದಿಗೆ ವಚನಗಳನ್ನು ರಚಿಸಿದ್ದಾನೆ. ಆ ಜಾತಿ ಈ ಜಾತಿಯವರೆನಬೇಡ ಹದಿನೆಂಟು ಜಾತಿಯೊಳಗಾವ ಜಾತಿಯಾದರೂ ಆಗಲಿ ಗುರುಕಾರುಣ್ಯವ ಪಡೆದು, ಅಂಗದ ಮೇಲೆ ಲಿಂಗವ ಧರಿಸಿ, ಪುನರ್ಜಾತರಾದ ಬಳಿಕ ಭಕ್ತರಾಗಲಿ, ಜಂಗಮವಾಗಲಿ, ಗುರುವಿನ ವೇಷವಿದ್ದವರ ಗುರುವೆಂದು ನಂಬಿ ದಾಸೋಹವ ಮಾಡುವುದೇ ಸದಾಚಾರ.

**ಗುರುವಿನ ತೆಗಳೆದು, ಗುರುವಾಜ್ಞೆಯ ಮೀರಿ**
**ಗುರು ಕೊಟ್ಟ ಪಂಚಮುದ್ರೆಗಳ ಮೇಲೆ**
**ಅನ್ಯ ಸಮಯ ಲಾಂಛನಾಂಕಿತರಾಗಿದ್ದು, ಗುರುದ್ರೋಹಿಗಳಾಗಿ**
**ಬಂದವರ ಜಂಗಮವೆಂದು ಕಂಡು, ನಮಸ್ಕರಿಸಿ ಆರಾಧಿಸಿ**
**ಪ್ರಸಾದವ ಕೊಂಡವನಿಗೆ ನಾಯಕ ನರಕ ತಪ್ಪದೆಂದ ಕಲಿದೇವಯ್ಯ.**

ಸಾಮಾನ್ಯನಾಗಿದ್ದು, ತನ್ನ ಭಕ್ತಿ, ಶಿಸ್ತು, ಹಾಗೂ ಕ್ರಮಬದ್ಧ ಜೀವನಕ್ರಮದಿಂದ ಶ್ರೇಷ್ಠ ಶಿವ ಶರಣರಾಗಿ, ಮಡಿವಾಳ ಸಮುದಾಯದ ಕುಲ ಗುರುಗಳೆನಿಸಿದ ಶಿವಶರಣ ಮಡಿವಾಳ ಮಾಚಯ್ಯ. ಈ ನಿಟ್ಟಿನಲ್ಲಿ ಫೆಬ್ರವರಿ 1 ರಂದು ಮಡಿವಾಳ ಮಾಚಿದೇವರ ಜಯಂತಿಯನ್ನು ಆಚರಿಸಬೇಕೆಂಬ ಸರ್ಕಾರದ ಆದೇಶ ಈತನಿಗೆ ಸಂದ ಗೌರವವಾಗಿದೆ.

ಅಂಬಿಗರ ಚೌಡಯ್ಯ ಹನ್ನೆರಡನೇ ಶತಮಾನದ ವಚನಕಾರರಲ್ಲಿ ಅಂಬಿಗರ ಚೌಡಯ್ಯನೂ ಒಬ್ಬ ಶಿವಶರಣ. ಈತನ ಕಾಲ ಕ್ರಿ.ಶ 1160. ಧಾರವಾಡ ಜಿಲ್ಲೆಯ ರಾಣೀಬೆನ್ನೂರು ತಾಲ್ಲೂಕಿನ ಚೌಡದಾನಪುರ ಈತನ ಹುಟ್ಟೂರು. ದೋಣಿ ನಡೆಸುವುದು ಈತನ ಕಸುಬು. ವಚನಕಾರರು ತಮ್ಮ ಇಷ್ಟದೈವವನ್ನು ಅಂಕಿತನಾಮ ಮಾಡಿಕೊಂಡರೆ ಈತ ತನ್ನ ಹೆಸರನ್ನೇ ಅಂಬಿಗರ ಚೌಡಯ್ಯ ಎಂದು ತನ್ನ ವಚನಗಳ ಅಂಕಿತನಾಮವನ್ನಾಗಿಸಿ ಹಲವಾರು ವಚನಗಳನ್ನು ರಚಿಸಿದ್ದಾನೆ. ಆತನ ವಚನಗಳಲ್ಲಿ ತುಂಬಾ ಪ್ರಸಿದ್ಧವೂ ತತ್ಕಾಲಕ್ಕೆ ಪ್ರಸ್ತುತವೂ ಆದ ವಚನವೆಂದರೆ,

**ಬಡತನಕೆ ಉಂಬುವ ಚಿಂತೆ**
**ಉಣಲಾದರೆ ಉಡುವ ಚಿಂತೆ**
**ಉಡಲಾದರೆ ಇಡುವ ಚಿಂತೆ**

**ಇಡಲಾದರೆ ಹೆಂಡಿರ ಚಿಂತೆ**
**ಹೆಂಡಿರಾದರೆ ಮಕ್ಕಳ ಚಿಂತೆ**
**ಮಕ್ಕಳಾದರೆ ಬದುಕಿನ ಚಿಂತೆ**
**ಕೇಡಾದರೆ ಮರಣದ ಚಿಂತೆ**
**ಇಂತೀ ಹಲವು ಚಿಂತೆಗಳಲ್ಲಿ ಇಪ್ಪವರನು ಕಂಡೆನು**
**ಶಿವನ ಚಿಂತೆಯಲ್ಲಿದ್ದವರೊಬ್ಬರನ್ನೂ ಕಾಣೆನೆಂದಾತ**
**ನಮ್ಮ ಅಂಬಿಗರ ಚೌಡಯ್ಯ ನಿಜ ಶರಣನು**

ಇಂದು ಗಂಗಾಮತಸ್ಥರು ಎಂಬ ಹೆಸರಿನಲ್ಲಿ ಅಂಬಿಗರ ಚೌಡಯ್ಯನ ವಂಶಸ್ಥರು ಅಂಬಿಗರ ಚೌಡಯ್ಯನನ್ನು ತಮ್ಮ ಕುಲ ಗುರುವಾಗಿರಿಸಿ ಜನವರಿ 21 ರಂದು ಅಂಬಿಗರ ಚೌಡಯ್ಯರ ಜಯಂತ್ಯುತ್ಸವವನ್ನು ಆಚರಿಸುತ್ತಾರೆ.

ಮಾದಾರ ಚೆನ್ನಯ್ಯ ಹನ್ನೆರಡನೇ ಶತಮಾನದ ವಚನಕಾರರಲ್ಲಿ ಮಾದಾರ ಚೆನ್ನಯ್ಯನೂ ಒಬ್ಬ ಶಿವಶರಣ. ತಮಿಳುನಾಡಿನ ಕಾಂಚಿಪಟ್ಟಣದಲ್ಲಿ 1140ರಲ್ಲಿ ಬದುಕಿದ್ದ ಒಬ್ಬ ಶಿವಭಕ್ತ. ಈತ ತಮಿಳುನಾಡಿನ ಕರಿಕಾಲ ಚೋಳರಾಜನ ಕುದುರೆಲಾಯದಲ್ಲಿ ಕೆಲಸಕ್ಕಿದ್ದ. ಸತ್ಯ ಶುದ್ಧ ಕಾಯಕದ ಜೊತೆಗೆ ಗುಪ್ತವಾಗಿ ಶಿವಪೂಜೆಯಲ್ಲಿ ತೊಡಗಿ ಶಿವನ್ನೇ ಒಲಿಸಿಕೊಂಡಾತ. ಸಾಕ್ಷಾತ್ ಶಿವನೇ ಈತನ ನಿರಾಡಂಬರದ, ನಿರಹಂಕಾರದ ಭಕ್ತಿಯನ್ನು ಲೋಕಕ್ಕೆ ಪ್ರಕಟಪಡಿಸಿದಂತಹ ಮಹಾ ಶಿವಭಕ್ತ. ನಿಜಾತ್ಮರಾಮ ರಮಣಾ ಈತನ ವಚನಗಳ ಅಂಕಿತನಾಮ.

**ವೇದ ಶಾಸ್ತ್ರಕ್ಕೆ ಹಾರುವನಾಗಿ,**
**ವೀರ ವಿತರಣಕ್ಕೆ ಕ್ಷತ್ರಿಯನಾಗಿ,**
**ಸರ್ವವನಾರೈದು ನೋಡುವಲ್ಲಿ**
**ವೈಶ್ಯನಾಗಿ ವ್ಯಾಪಾರದೊಳಗಾಗಿ**
**ಕೃಷಿಯ ಮಾಡುವುದಕ್ಕೆ ಶೂದ್ರನಾಗಿ,**
**ಇಂತೀ ಜಾತಿಗೋತ್ರದೊಳಗಾದ**
**ನೀಚ ಶ್ರೇಷ್ಠವೆಂಬ ಎರಡು ಕುಲವಲ್ಲದೆ,**
**ಹೊಲೆ ಹದಿನೆಂಟು ಜಾತಿಯೆಂಬ ಕುಲವಿಲ್ಲ.**
**ಬ್ರಹ್ಮವನರಿದಲ್ಲಿ ಬ್ರಾಹ್ಮಣ, ಸರ್ವ ಜೀವಹತ**
**ಕರ್ಮಕ್ಕೊಳಗಾಗಿದ್ದಲ್ಲಿ ಸಮಗಾರ, ಈ ಉಭಯ**
**ವನರಿಯದಿದ್ದರೆ ಕೈಯುಳಿಗತ್ತಿ, ಆಡಿಗೂಂಟಕ್ಕಡಿಯಾಗಬೇಡ**
**ಅರಿ ನಿಜಾತ್ಮರಾಮ ರಮಣಾ.**

ಈ ನಿಟ್ಟಿನಲ್ಲಿ ಮಾದಾರ ಚೆನ್ನಯ್ಯ ಸಮುದಾಯ ಸಂಘದ ನೇತೃತ್ವದಲ್ಲಿ ಪ್ರತಿ ವರ್ಷ ಡಿಸೆಂಬರ್ 12ರಂದು ಮಾದಾರಚೆನ್ನಯ್ಯ ಜಯಂತಿಯನ್ನು ಆಚರಿಸಲಾಗುತ್ತದೆ.

**ಉಪಸಂಹಾರ:**

ಹನ್ನೆರಡನೇ ಶತಮಾನದಲ್ಲಿದ್ದ ಶಿವ ಶರಣರು ನುಡಿವಂತೆ ನಡೆದು, ನಡೆವಂತೆ

ನುಡಿದು ಶಿವ ಭಕ್ತಿಯ ಜೊತೆಗೆ ವಚನಗಳ ರಚನೆಗಳ ಮೂಲಕ ಸಮಾಜವನ್ನು ತಿದ್ದಿದವರು. ಕೆಲವರು ಸಂಸಾರದಲ್ಲಿದ್ದುಕೊಂಡೇ ಆಧ್ಯಾತ್ಮಿಕ ಬದುಕಿನ ಮಹತ್ವವನ್ನು ತೋರಿಸಿಕೊಟ್ಟರು. ಜಾತಿ ಯಾವುದಾದರೂ, ಮಾಡುವ ಕೆಲಸ ಯಾವುದಾದರೂ ಸರಿ ಅದರಲ್ಲಿ ಕಾಯಕ ನಿಷ್ಠೆ, ಪ್ರಾಮಾಣಿಕತೆ ಇದ್ದರೆ, ಅಲ್ಲಿಯೂ ಭಗವಂತನನ್ನು ಕಾಣಲು ಸಾಧ್ಯವಿದೆ ಎನ್ನುವುದನ್ನು ತೋರಿಸಿಕೊಟ್ಟವರು. ಆ ಹಿನ್ನೆಲೆಯಲ್ಲಿ ಅವರ ಜೀವನ ಮೌಲ್ಯಗಳನ್ನು ಸಾರುವ ವಚನಗಳು ಇಂದಿಗೂ ಪ್ರಸ್ತುತವಾಗಿದೆ. ಕುಲದಿಂದ ಕುಲವೃತ್ತಿ ಹುಟ್ಟಿಕೊಂಡಿತೆ ಅಥವಾ ಕುಲವೃತ್ತಿಯಿಂದ ಕುಲ ಹುಟ್ಟಿತೆ? ಒಟ್ಟಿನಲ್ಲಿ ಈ ಕಾಯಕ ಶರಣರ ವೃತ್ತಿಯ ಹಿನ್ನೆಲೆಯಲ್ಲಿ ಅವರದೇ ವೃತ್ತಿಯನ್ನು ಮುಂದುವರಿಸಿಕೊಂಡು ಬಂದ ಸಮುದಾಯ ಮುಂದೊಂದು ದಿನ ಅವರನ್ನೇ ಕುಲಗುರುಗಳನ್ನಾಗಿ ನಂಬಿಕೊಂಡು ಆರಾಧಿಸಿಕೊಂಡು ಬರುತ್ತಿರುವುದನ್ನು ಗಮನಿಸಬಹುದು. ಈ ಕಾರಣಗಳಿಂದ ಅವರು ಸಮಾಜಕ್ಕೆ ಕೊಟ್ಟ ಕೊಡುಗೆಯ ನೆನಪಿನಾರ್ಥವಾಗಿ ಅವರ ಅನುಪಸ್ಥಿತಿಯಲ್ಲೂ ಅವರ ಜಯಂತ್ಯುತ್ಸವವನ್ನು ಖಾಸಗಿ ಹಾಗೂ ಸರಕಾರದ ಮಟ್ಟಿನಲ್ಲಿ ಆಚರಿಸುವ ಮೂಲಕ ಶರಣರನ್ನು ಹಾಗೂ ಶರಣರ ಮೌಲ್ಯಗಳನ್ನು ಉಳಿಸುವ ಪ್ರಯತ್ನವನ್ನು ಈ ಮೂಲಕ ಮಾಡಲಾಗುತ್ತಿದೆ.

**ಪರಾಮರ್ಶನ ಗ್ರಂಥಗಳು:**

1. ಗುಡ್ಡಪ್ಪ ಜಿ., (2000), ಶರಣರ ಅಭಿವ್ಯಕ್ತಿ ಮತ್ತು ಆಶಯ, ನೆಲಮಲೆ ಪಬ್ಲಿಕೇಶನ್ ಹೌಸ್, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.